ಹಾಸನ ವಿಧಾನ ಸಭಾ ಕ್ಷೇತ್ರದ ಕಟ್ಟಾಯ ಹೋಬಳಿಯ ಝಾನ್ಸಿರಾಣಿ ಲಕ್ಷ್ಮಿಬಾಯಿ ಯುವತಿ ಸಂಘ, ಉಪ್ಪಳ್ಳಿ ಹಾಗೂ ಶಾಂತಿಗ್ರಾಮ ಹೋಬಳಿಯ ಸಾವಂತನಹಳ್ಳಿ ಗ್ರಾಮದ ಸತೀಶ್ ನ್ಯಾಯಬೆಲೆ ಅಂಗಡಿ ಮತ್ತು ಶಾಂತಿಗ್ರಾಮದ ಶ್ರೀ ಶಾಮಣ್ಣರವರ ನ್ಯಾಯಬೆಲೆ ಅಂಗಡಿ ವಿರುದ್ಧ ಪಡಿತರ ಪದಾರ್ಥಗಳ ದುರುಪಯೋಗದ ಬಗ್ಗೆ ದೂರುಗಳು ಬಂದಿರುತ್ತವೆ.

ಅ) ಹಾಸನ ವಿಧಾನ ಸಭಾ ಕ್ಷೇತ್ರದ ಕಟ್ಟಾಯ ಹೋಬಳಿಯ ಝಾನ್ಸಿರಾಣಿ ಲಕ್ಷ್ಮಿಬಾಯಿ ಯುವತಿ ಸಂಘ, ಉಪ್ಪಳ್ಳಿ, ಹಾಗೂ ಶಾಂತಿ ಗ್ರಾಮ ಹೋಬಳಿಯ ಸಾವಂತನಹಳ್ಳಿ ಗ್ರಾಮದ ಸತೀಶ್‌ರವರ ನ್ಯಾಯಬೆಲೆ ಅಂಗಡಿ ಮತ್ತು ಶಾಂತಿ ಗ್ರಾಮದ ಶ್ರೀ ಶಾಮಣ್ಣನವರ ನ್ಯಾಯಬೆಲೆ ಅಂಗಡಿಗಳಲ್ಲಿ ಪಡಿತರ ವಸ್ತುಗಳ ದುರುಪಯೋಗವಾಗಿರುವುದು ಮೇಲ್ನೋಟಕ್ಕೆ ಸಾಬೀತಾದ ಕಾರಣ ಮೂರೂ ನ್ಯಾಯಬೆಲೆ ಅಂಗಡಿಗಳ ಪ್ರಾಧೀಕಾರವನ್ನು ಅಮಾನತ್ತಿನಲ್ಲಿಡಲಾಗಿದೆ. ಜಿಲ್ಲಾಧಿಕಾರಿಗಳ ನ್ಯಾಯಾಲಯದಲ್ಲಿ ಮೂರೂ ಪ್ರಕರಣಗಳು ವಿಚಾರಣಾ ಹಂತದಲ್ಲಿದ್ದು, ಅಮಾನತ್ತು ಆದೇಶ ಮುಂದುವರಿಯುತ್ತದೆ. ಪಡಿತರ ಚೀಟಿದಾರರಿಗೆ ಅನಾನುಕೂಲವಾಗದಂತೆ ಈ 3 ನ್ಯಾಯಬೆಲೆ ಅಂಗಡಿಗಳ ಪಡಿತರ ಚೀಟಿದಾರರಿಗೆ ಸಮೀಪದ ನ್ಯಾಯಬೆಲೆ ಅಂಗಡಿಗಳ ಮುಖಾಂತರ ಪರ್ಯಾಯ ವ್ಯವಸ್ಥೆ ಮಾಡಿ ಪಡಿತರ ವಸ್ತುಗಳನ್ನು ವಿತರಿಸಲಾಗುತ್ತಿದೆ.

ರಾಜ್ಯದಲ್ಲಿ ಅಬಕಾರಿಯಿಂದ ಬಂದ ಆದಾಯ.

2349(2796) ಶ್ರೀ ಹೊನ್ನಳ್ಳಿ ಜಬ್ಬಾರ್ ಖಾನ್ ಹೈಯತ್ ಖಾನ್ (ಹುಬ್ಬಳ್ಳಿ) :— ಮಾನ್ಯ ಮುಖ್ಯಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಅಬಕಾರಿ ಇಲಾಖೆಯಿಂದ ಬಂದ ಆದಾಯವೆಷ್ಟು (ಜಿಲ್ಲಾವಾರು ವಿವರ ನೀಡುವುದು)

ಶ್ರೀ ಎಸ್.ಎಂ. ಕೃಷ್ಣ (ಮುಖ್ಯಮಂತ್ರಿಗಳು) :—

ಅ) ರಾಜ್ಯದಲ್ಲಿ ಕಳೆದ 3 ವರ್ಷಗಳಲ್ಲಿ ಅಬಕಾರಿ ಇಲಾಖೆಯಿಂದ ಬಂದ ಆದಾಯದ ವಿವರ ಈ ಕೆಳಕಂಡಂತಿದೆ.

ವರ್ಷ	ಆದಾಯ (ಕೋಟಿ ರೂ.ಗಳಲ್ಲಿ)
1998-99	1019.11
1999-2000	1233.55
2000-2001	1550.23

(ಜಿಲ್ಲಾವಾರು ಮಾಹಿತಿಯನ್ನು ಅನುಬಂಧದಲ್ಲಿ ನೀಡಲಾಗಿದೆ.

ಜಿಲ್ಲಾವಾರು ಅಬಕಾರಿ ಆದಾಯ

(ಕೋಟಿ ರೂ.ಗಳಲ್ಲಿ)

ಕ್ರ.ಸಂ.	ಜಿಲ್ಲೆ	1998-99	1999-00	2000-01
1.	ಬೆಂಗಳೂರು ನಗರ	231.17	260.441	334.02
2.	ಬೆಂಗಳೂರು (ಗ್ರಾ)	59.00	72.08	103.41
3.	ಬಾಗಲಕೋಟಿ	16.60	22.93	27.57
4.	ಬೆಳಗಾಂ	54.69	82.64	76.27
5.	ಬಳ್ಳಾರಿ	45.62	56.66	63.22
6.	ಬೀದರ್	25.27	30.66	35.28
7.	ಬಿಜಾಪುರ	17.05	19.67	23.14
8.	ಚಾಮರಾಜನಗರ	11.20	16.63	25.50
9.	ಚಿಕ್ಕಮಗಳೂರು	21.38	27.03	37.31
10.	ಚಿತ್ರದುರ್ಗ	18.84	22.85	30.47
11.	ದಕ್ಷಿಣ ಕನ್ನಡ	47.38	63.71	80.54
12.	ದಾವಣಗೆರೆ	25.12	32.95	41.14
13.	ಧಾರವಾಡ	28.05	30.47	36.91
14.	ಗದಗ	7.57	11.11	12.23
15.	ಗುಲ್ಬರ್ಗ	47.16	56.65	70.16
16.	ಹಾಸನ	29.38	33.43	42.75
17.	ಹಾವೇರಿ	17.41	26.31	31.73
18.	ಕೊಡಗು	24.31	31.75	36.91
19.	ಕೋಲಾರ	35.81	41.20	50.02
20.	ಕೊಪ್ಪಳ	15.21	17.81	24.03
21.	ಮಂಡ್ಯ	37.89	50.67	64.64
22.	ಮೈಸೂರು	54.83	69.54	92.96
23.	ರಾಯಚೂರು	27.18	34.38	39.56
24.	ಶಿವಮೊಗ್ಗ	32.02	35.85	45.85
25.	ತುಮಕೂರು	35.14	42.42	53.10
26.	ಉಡುಪಿ	34.12	37.62	42.66
27.	ಉತ್ತರ ಕನ್ನಡ	19.71	26.05	28.85
	ಒಟ್ಟು	**1019.11**	**1233.55**	**1550.23**